

# ಕನ್ನಡಶಾಲೆ ಮನೇಲಲ್ವೇ...

ಮಕ್ಕಳ ಮನಸ್ಸಲ್ಲಿ ಕನ್ನಡಪ್ರೀತಿಯನ್ನು ಬಿತ್ತುವ ಭಾಷಾಪ್ರೀತಿಯ ಕೆಲಸ 'ಕನ್ನಡದ ನಾಳೆಗಳು' ಉಜ್ವಲವಾಗಿರಲಿಕ್ಕೆ ಅಗತ್ಯ. ಈ ಕನ್ನಡಪ್ರೀತಿ ಬಿತ್ತಬೇಕಾದ ಕೆಲಸವನ್ನು ಮೊದಲು ಮಾಡಬೇಕಾದುದು ಅಪ್ಪ–ಅಮ್ಮಂದಿರು! ನಿಮ್ಮ ಮನೆಯಲ್ಲಿ ಈ 'ನುಡಿಪ್ರೀತಿ'ಯ ಕೆಲಸ ಆಗುತ್ತಿದೆಯೇ?

■ **ಕೋಡಿಬೆಟ್ಟು ರಾಜಲಕ್ಷ್ಮಿ**
ಕಲೆ: ಕೆ.ಆರ್. ಸ್ವಾಮಿ

ಕನ್ನಡ ಸಂಗಡ

ಕನ್ನಡದ ನಾಳೆಗಳ ಬಗ್ಗೆ ಕಾಳಜಿಯುಳ್ಳವರು ಮೊದಲು ಯೋಚಿಸಬೇಕಾದುದು ಮಕ್ಕಳ 'ಇಂದು'ಗಳ ಬಗ್ಗೆ. ವರ್ತಮಾನದಲ್ಲಿ ಮಕ್ಕಳನ್ನು ಹೇಗೆ ಬೆಳೆಸುತ್ತಿದ್ದೇವೆ? ಅವರಿಗೆ ಕನ್ನಡದ ಪರಿಸರವನ್ನು ಯಾವ ರೂಪದಲ್ಲಿ ಒದಗಿಸುತ್ತಿದ್ದೇವೆ? ಶಾಲೆಯಲ್ಲಿ ಕನ್ನಡ ಕಲಿಕೆಯ ಅವಕಾಶ ಮತ್ತು ಗುಣಮಟ್ಟ ಹೇಗಿದೆ? ಮನೆಯಲ್ಲಿ ಕನ್ನಡದ ಪರಿಸರ ಹೇಗಿದೆ? – ಈ ಎಲ್ಲ ಸಂಗತಿಗಳು ಮಕ್ಕಳಲ್ಲಿ ಕನ್ನಡತನ ಮತ್ತು ಕನ್ನಡಪ್ರೇಮ ಮೂಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಕರ್ನಾಟಕದಲ್ಲಿ ಕನ್ನಡಪ್ರೇಮ ಸಹಜವಾಗಿ ಮೂಡುತ್ತದೆ ಎನ್ನುವುದು ಸರಳ ನಂಬಿಕೆ. ಆದರೆ, ಪರಿಸ್ಥಿತಿ ಅಷ್ಟು ಸರಳವಾಗಿಲ್ಲ. ಭಾಷಾಭಿಮಾನ ಎನ್ನುವಂತಹದ್ದು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕಾದ ಸಂಗತಿ. ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತೆ ಭಾಷಾಪ್ರಜ್ಞೆಯನ್ನೂ ರೂಪಿಸಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶಾಲೆಗಳಲ್ಲಿ ಶಿಕ್ಷಕರೂ ಮನೆಗಳಲ್ಲಿ ಪೋಷಕರೂ ಪ್ರಜ್ಞಾಪೂರ್ವಕವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ಮಕ್ಕಳಲ್ಲಿ 'ಕನ್ನಡತನ' ಮೂಡಿಸಲು ಇರುವ ಸಂಕಷ್ಟಗಳು ಒಂದೆರಡಲ್ಲ. ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ. ಇನ್ನೊಂದೆಡೆ, ಇಂಗ್ಲಿಷ್ ಮಾಧ್ಯಮ ಶಾಲೆಗಳ ಮಕ್ಕಳ ಮೋಕ್ಷಕ್ಕೆ ದಾರಿ ಎನ್ನುವ ನಂಬಿಕೆಯೂ ಬೆಳೆಯುತ್ತಿದೆ. ಆ ನಂಬಿಕೆಗೆ ಇಂಬು ನೀಡುವ ಕೆಲಸವನ್ನು ಸರ್ಕಾರಗಳೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮಾಡುತ್ತಿವೆ. ಇಂಥ ಸಂದರ್ಭದಲ್ಲಿ, ಮನೆಗಳೇ ಶಾಲೆಗಳಾಗುವ ಹಾಗೂ ಮನೆಯ ಪರಿಸರದಲ್ಲಿ ಮಕ್ಕಳಿಗೆ ಕನ್ನಡತನ ರೂಢಿಸುವ ಪ್ರಯತ್ನಗಳಿಗೆ ವಿಶೇಷ ಮಹತ್ವವಿದೆ.

ತಂತ್ರಜ್ಞಾನವು ನಮ್ಮ ಜೀವನವನ್ನು ವ್ಯಾಪಿಸಿಕೊಂಡಿರುವ ಆಧುನಿಕ ಸಂದರ್ಭ ಕೂಡ ಇಂಗ್ಲಿಷ್ ಪ್ರೀತಿಗೆ ನೀರುಗೊಬ್ಬರವಾಗಿ ಪರಿಣಮಿಸಿದೆ. ಅಡುಗೆ ಮನೆಯ 'ತಿಂಡಿ ತಿನಿಸು, ಊಟೋಪಚಾರ'ವೆಲ್ಲ 'ರೆಸಿಪಿ'ಗಳಾಗಿ ಬದಲಾಗಿರುವ ದಿನಗಳಿವು. ಇಂಥ ಸಂಕೀರ್ಣ ಸಂದರ್ಭದಲ್ಲಿ, ಮಕ್ಕಳಲ್ಲಿ ಕನ್ನಡಪ್ರಜ್ಞೆಯನ್ನು ರೂಢಿಸುವ ನಿಟ್ಟಿನಲ್ಲಿ ಪೋಷಕರು ನಡೆಸುವ ಪ್ರಯತ್ನಕ್ಕೆ ವಿಶೇಷ ಮಹತ್ವವಿದೆ. ಹೀಗೆ, ಮಕ್ಕಳ ಮನಸ್ಸಿನಲ್ಲಿ ಕನ್ನಡದ ಬೀಜಗಳನ್ನು ಊರುತ್ತಿರುವ ಪೋಷಕರು ಕಡಿಮೆ ಸಂಖ್ಯೆಯಲ್ಲಾದರೂ ನಮ್ಮ ನಡುವೆ ಇರುವುದು ಕನ್ನಡದ ನಾಳೆಗಳ